# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –153 ಜಯನಗರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಜಯನಗರ ವಾರ್ಡ್–153 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:04/01/2022 ಮಂಗಳವಾರದಂದು ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಗೆ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ರವರು.
2. ಶ್ರೀ. ನವೀನ್‌ಕುಮಾರ್ ಕೆ. ಕಿರಿಯ ಅಭಿಯಂತರರು.
3. ಶ್ರೀ. ವಿಜಯಕುಮಾರ್ ಕೆ.ಆರ್ ಕಿರಿಯ ಆರೋಗ್ಯ ಪರಿವೀಕ್ಷಕರು.
4. ಶ್ರೀ. ಆನಂದ್ ಬಡಿಗೇರ, ಕಿರಿಯ ಅಭಿಯಂತರರು (ಬೆಂ.ನೀ.ಸ ಮತ್ತು ಒ. ಮಂಡಳಿ).
5. ಶ್ರೀ. ಪ್ರಕಾಶ್ ಬಿ. ಸಹಾಯಕ ಅಭಿಯಂತರರು ಬೆಸ್ಕಾಂ ವಿಭಾಗ.
6. ಶ್ರೀ. ಪ್ರಕಾಶ್ ಕೆ. ಕಿರಿಯ ಅಭಿಯಂತರರು ಬೆಸ್ಕಾಂ ವಿಭಾಗ.
7. ಶ್ರೀ. ವಿಜಯ್‌ಕುಮಾರ್ ಜಿ. ಕಿರಿಯ ಅಭಿಯಂತರರು ಬೆಸ್ಕಾಂ ವಿಭಾಗ.
8. ಶ್ರೀ. ನಾರಾಯಣಸ್ವಾಮಿ ಕೆ. ಮೌಲ್ಯಮಾಪಕರು ವಾರ್ಡ್–153.
9. ಶ್ರೀ. ಎಂ. ಕೃಷ್ಣಮೂರ್ತಿ, ಕಂದಾಯ ವಸೂಲಿಗಾರರು ವಾರ್ಡ್–153.
10. ಶ್ರೀ. ಸಿದ್ದರಾಮಯ್ಯ ಎ.ಎಸ್.ಐ, ಸಿದ್ದಾಪುರ ಪೊಲೀಸ್ ಠಾಣೆ.
11. ಶ್ರೀ. ಮಲ್ಲಪ್ಪ, ಪಿ.ಸಿ. ಮೈಕೋ ಲೇಔಟ್ ಸಂಚಾರ ಪೊಲೀಸ್ ಠಾಣೆ.
12. ಶ್ರೀ. ಬಹದ್ದೂರ್, ಡಾ॥ ರಘುನಾಥ್, ಶ್ರೀ. ಜಯಕೃಷ್ಣನ್, ಶ್ರೀ ಅನೀಸ್ ಅಹಮದ್, ಶ್ರೀ. ಕಮಲ್ ಕಬೀರ್, ಶ್ರೀ. ಫಜಲ್ ಖಾನ್, ಶ್ರೀ. ಲಕ್ಷ್ಮೀಶ್ ಕೆ.ಎಂ, ಶ್ರೀ. ಸೋಮಶೇಖರ್ ಕೆ.ಸಿ, ಶ್ರೀ. ಸಮೀಹುಲ್ಲಾ & ಶ್ರೀಮತಿ. ಶಾನ್ (ಸಾರ್ವಜನಿಕರು).

**ಸಭೆಗೆ ಗೈರು ಹಾಜರಾದ ಇಲಾಖೆಗಳು:–**

1. ಬೆಂ.ನೀ.ಸ. ಮತ್ತು ಒಳಚರಂಡಿ ಮಂಡಳಿ ಇಲಾಖೆ, ಅಧಿಕಾರಿಗಳು ವಾರ್ಡ್ 153.
2. ಪೊಲೀಸ್ ಇನ್ಸ್‌ಪೆಕ್ಟರ್ (ಸಂಚಾರ) ಜಯನಗರ.
3. ಅರಣ್ಯ ಇಲಾಖೆಯ ಅಧಿಕಾರಿಗಳು.
4. ಪೊಲೀಸ್ ಇಲಾಖೆ ಅಧಿಕಾರಿಗಳು (ಕಾನೂನು ಮತ್ತು ಸುವ್ಯವಸ್ಥೆ) ತಿಲಕ್‌ನಗರ.

*********



Scanned with CamScanner

1. ವಾರ್ಡ್‌–153 ರ ಕುಂದು ಕೊರತೆಗಳ ಬಗ್ಗೆ ಚರ್ಚಿಸುವ ಸಂಬಂಧ ದಿನಾಂಕ:04/01/2022 ಮಂಗಳವಾರದಂದು ಮಧ್ಯಾಹ್ನ 3.00 ಗಂಟೆಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

2. ವಾರ್ಡಿನ ಸ್ಥಳಿಯರಾದ ಶ್ರೀ. ಅನೀಸ್ ಅಹಮದ್ ರವರು ಮಾತನಾಡಿ 3ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಎಸ್.ಆರ್.ಕೆ ಗಾರ್ಡನ್ ಇಲ್ಲಿ ಬೆಂಗಳೂರು ನೀರು ಸರಬರಾರು ಮತ್ತು ಒಳಚರಂಡಿ ಮಂಡಳಿ ವತಿಯಿಂದ ನಿರ್ಮಿಸಿರುವ ಮ್ಯಾನ್‌ಹೋಲ್ ಹಾಳಾಗಿದ್ದು, ಇದನ್ನು ಬದಲಾಯಿಸುವಂತೆ ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸಿ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

**ಕ್ರಮ : ಬೆಂ.ನೀರು ಸರಬರಾಜು & ಒಳಚರಂಡಿ ಮಂಡಳಿ**

3. ವಾರ್ಡಿನ ಸ್ಥಳಿಯರಾದ ಶ್ರೀ. ಕಮಲ್ ಕಬೀರ್ ರವರು ಮಾತನಾಡಿ ವಾರ್ಡ್ ಕಮಿಟಿ ಸಭೆಯನ್ನು ಲೈವ್‌ಕಾಸ್ಟ್ ಮಾಡುವ ಬಗ್ಗೆ ಪ್ರಸ್ತಾಪಿಸಿ ಅನುಮತಿಯನ್ನು ನೀಡುವಂತೆ ಕೋರಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಈ ವಿಷಯವನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು ಚರ್ಚಿಸಿ, ಸದರಿಯವರ ಅಭಿಪ್ರಾಯ ಪಡೆದು ಮುಂದಿನ ಸಭೆಯಲ್ಲಿ ತಮಗೆ ಮಾಹಿತಿ ನೀಡಲಾಗುವುದೆಂದು ಸಭೆಗೆ ತಿಳಿಸಿದರು.

**ಕ್ರಮ : ವಾರ್ಡ್ ಅಭಿಯಂತರರು**

4. ವಾರ್ಡಿನ ಸ್ಥಳಿಯರಾದ ಶ್ರೀ. ಸಮೀಹುಲ್ಲಾ ರವರು ಮಾತನಾಡಿ ತಿಲಕ್‌ನಗರ ಮುಖ್ಯರಸ್ತೆಯ ಪಾದಚಾರಿ ಮಾರ್ಗವನ್ನು ಅಲ್ಲಿನ ಅಂಗಡಿಯವರು ಒತ್ತುವರಿ ಮಾಡಿಕೊಂಡಿರುವುದರಿಂದ ಪಾದಚಾರಿಗಳಿಗೆ ಓಡಾಡಲು ಅನಾನುಕೂಲವಾಗಿರುತ್ತದೆ. ಆದ್ದರಿಂದ ಪಾದಚಾರಿ ಮಾರ್ಗಕ್ಕೆ ಅಡ್ಡಲಾಗಿ ವಾಹನ ನಿಲ್ಲಿಸುವ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಆ ಪ್ರದೇಶ ವ್ಯಾಪ್ತಿಯ ಸಂಚಾರ ಪೊಲೀಸರೊಡನೆ ಮಾತನಾಡಿ ಸದರಿ ಒತ್ತುವರಿಯನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

**ಕ್ರಮ : ಪೊಲೀಸ್ ಇನ್ಸ್‌ಪೆಕ್ಟರ್, ಮೈಕೋ ಲೇಔಟ್ (ಸಂಚಾರ)**
**ಹಾಗೂ ಸ.ಕಾ.ನಿ.ಅ (ಹೊಂಬೇಗೌಡನಗರ)**



Scanned with CamScanner

5. ವಾರ್ಡ್ 153ರ ಸ್ಥಳೀಯರಾದ ಶ್ರೀ. ಜಯಕೃಷ್ಣನ್ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್‌ನ ಮುಖ್ಯರಸ್ತೆಯ ಎರಡೂ ಕಡೆಯ ಮಳೆ ನೀರು ಚರಂಡಿಯನ್ನು ಅಭಿವೃದ್ಧಿ ಪಡಿಸುವಂತೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ವಾರ್ಡ್ ಅಭಿಯಂತರರಿಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

**ಕ್ರಮ: ವಾರ್ಡಿನ ಅಭಿಯಂತರರು**

6. ವಾರ್ಡ್ 153ರ ಸ್ಥಳೀಯರಾದ ಡಾ|| ರಘುನಾಥ್ ರವರು ಮಾತನಾಡಿ ಕಳೆದ ಸಭೆಗೆ ಮತ್ತು ಹಾಲಿ ಸಭೆಗೆ ಜಯನಗರ ಸಂಚಾರ ಪೊಲೀಸ್ ಇಲಾಖೆಯ ಅಧಿಕಾರಿಗಳು ಹಾಜರಾಗದೇ ಇರುವ ಬಗ್ಗೆ ಅಸಮಧಾನ ವ್ಯಕ್ತಪಡಿಸಿ ವಾರ್ಡ್ ಅಭಿಯಂತರರಿಗೆ ತಾವು ಸದರಿಯವರ ಮೇಲಾಧಿಕಾರಿಗಳಿಗೆ ಅಂದರೆ ಪೊಲೀಸ್ ಆಯುಕ್ತರು ರವರಿಗೆ ಪತ್ರ ಬರೆದು ಈ ಬಗ್ಗೆ ತಿಳಿಸುವಂತೆ ಹೇಳಿ ಸಭೆಯ ಮಧ್ಯದಲ್ಲಿ ಸಭೆಯಿಂದ ಹೊರನಡೆದರು.

**ಕ್ರಮ : ವಾರ್ಡ್ ಅಭಿಯಂತರರು**
**& ಪೊಲೀಸ್ ಇನ್ಸ್‌ಪೆಕ್ಟರ್ (ಸಂಚಾರ) ಜಯನಗರ**

7. ವಾರ್ಡ್ 153ರ ಸ್ಥಳೀಯರಾದ ಶ್ರೀ. ಸೋಮಶೇಖರ್ ರವರು ಮಾತನಾಡಿ 8ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್ ರಸ್ತೆಯನ್ನು ಗುಡಿಸುವ ಪೌರಕಾರ್ಮಿಕರು ಪ್ರತಿ ದಿನ ಸರಿಯಾಗಿ ಗುಡಿಸದೇ ಇರುವುದರಿಂದ ಅಲ್ಲಿ ಸರಿಯಾಗಿ ಕಸ ತೆರವಾಗುತ್ತಿಲ್ಲವೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸದರಿ ರಸ್ತೆಯನ್ನು ಗುಡಿಸುವ ಪೌರಕಾರ್ಮಿಕರಿಗೆ ಈ ಬಗ್ಗೆ ಎಚ್ಚರಿಸಿ ಪ್ರತಿದಿನ ಸ್ವಚ್ಛಗೊಳಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿದರು.

**ಕ್ರಮ : ಕಿರಿಯ ಆರೋಗ್ಯ ಪರಿವೀಕ್ಷಕರು**

8. ವಾರ್ಡ್ 153ರ ಸ್ಥಳೀಯರಾದ ಶ್ರೀಮತಿ. ಶಾನ್ ರವರು ಮಾತನಾಡಿ ಎಂ.ಡಿ ಬ್ಲಾಕ್ ಸುತ್ತಮುತ್ತ ತುಂಬಾ ದಿನಗಳಿಂದ ಅನಧಿಕೃತವಾಗಿ ಹಳೆಯ ವಾಹನಗಳು ನಿಂತಿರುವುದರಿಂದ ಸದರಿ ಜಾಗದಲ್ಲಿ ಪ್ರತಿ ದಿನ ಕಸ ಮತ್ತು ಡೆಬ್ರಿಸ್ ಶೇಖರಣೆಯಾಗುತ್ತಿರುತ್ತದೆ. ಆದ್ದರಿಂದ ಇವುಗಳನ್ನು ತೆರವುಗೊಳಿಸುವಂತೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಪೊಲೀಸ್ ಇಲಾಖೆಯವರಿಗೆ ತಿಳಿಸಿ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

**ಕ್ರಮ : ಪೊಲೀಸ್ ಇನ್ಸ್‌ಪೆಕ್ಟರ್, ಸಂಚಾರ (ಬಸವನಗುಡಿ)**



Scanned with CamScanner

9. ವಾರ್ಡ್ 153ರ ಸ್ಥಳೀಯರಾದ ಶ್ರೀ. ಬಹದ್ದೂರ್ ರವರು ಮಾತನಾಡಿ ಗುಲ್ಬರ್ಗ ಕಾಲೋನಿ ಮತ್ತು ಆರ್.ಬಿ.ಐ ಕಾಲೋನಿ ಸುತ್ತಮುತ್ತ ಸಿ.ಸಿ. ಟಿವಿ ಕ್ಯಾಮರಾಗಳನ್ನು ಅಳವಡಿಸುವಂತೆ ಕೋರಿದರು. ಹಾಗೂ ಸಭೆಯಲ್ಲಿ ಹಾಜರಿದ್ದ ಬಿ.ಹೆಚ್.ಇ.ಎಲ್ ಲೇಔಟ್‌ನ ಸಾರ್ವಜನಿಕರು ಸಹ ನಮ್ಮ ಪ್ರದೇಶ ವ್ಯಾಪ್ತಿಯಲ್ಲಿಯೂ ಸಹ ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಲು ಕೋರಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಹಾಲಿ ಸಾಲಿನಲ್ಲಿ ಅನುದಾನ ಲಭ್ಯವಿಲ್ಲದ ಕಾರಣ ಸದರಿ ಯೋಜನೆಯ ಕಾಮಗಾರಿಯನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಮುಂದಿನ ಸಾಲಿನಲ್ಲಿ ಅನುದಾನ ಲಭ್ಯತೆಯನ್ನು ಗಮನಿಸಿಕೊಂಡು ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

ಕ್ರಮ : ವಾರ್ಡ್ ಅಭಿಯಂತರರು

10. ವಾರ್ಡ್ ವ್ಯಾಪ್ತಿಯಲ್ಲಿ ಕಾಮಗಾರಿ ಕೈಗೊಳ್ಳಲು ಈ ಕೆಳಗಿನಂತೆ ಅನುದಾನ ನೀಡಿದ್ದು, ಅಂದಾಜು ಪಟ್ಟಿ ತಯಾರಿಸುವ ಬಗ್ಗೆ ಸಭೆಗೆ ತಿಳಿಸಲಾಯಿತು.

i. Annual Maintenance of Borewells and Water supply pipe lines in Ward Jurisdiction in ward No.153-Jayanagara. (ಸದರಿ ಕಾಮಗಾರಿಯನ್ನು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಅವಶ್ಯಕ ಪ್ರದೇಶಗಳಲ್ಲಿ ಕೈಗೊಳ್ಳಲಾಗುವುದು).

ii. Maintenance of footpaths, drain and Re-asphalting of damages roads in Ward Jurisdiction in Ward No 153 - Jayanagara. (ಸದರಿ ಕಾಮಗಾರಿಯನ್ನು 26ನೇ ಮುಖ್ಯರಸ್ತೆ, ರೋಷನ್ ಕಾಲೋನಿ ಚರಂಡಿಗಳನ್ನು ಮತ್ತು ಪಾದಚಾರಿ ಮಾರ್ಗಗಳ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ).

iii. Filling of Potholes in ward Jurisdiction in Ward No 153- Jayanagara. (ಸದರಿ ಕಾಮಗಾರಿಯನ್ನು ವಾರ್ಡ್ ವ್ಯಾಪ್ತಿಯಲ್ಲಿ ಆಗಾಗ್ಗೆ ಬೀಳುವ ರಸ್ತೆ ಗುಂಡಿಗಳನ್ನು ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತದೆ).



Scanned with CamScanner

ಮೇಲಿನ ಎಲ್ಲಾ ಅಂಶಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಹಾಜರಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ತಿಳಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಗೈರುಹಾಜರಾಗಿರುವ ಇತರೆ ಇಲಾಖೆಯವರು ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ತ್ರಿಳಿಸುತ್ತಾ ಸಭೆ ಮುಕ್ತಾಯಗೊಳಿಸಲಾಯಿತು.

(ನವೀನ್‌ಕುಮಾರ್ ಕೆ.)
ಕಾರ್ಯದರ್ಶಿ
ವಾರ್ಡ್–153 ಜಯನಗರ

(ವರಲಕ್ಷ್ಮಮ್ಮ ಎಲ್)
ನೋಡಲ್ ಅಧಿಕಾರಿ
ವಾರ್ಡ್–153 ಜಯನಗರ



Scanned with CamScanner